ಓ.ಎಸ್. ನಂ. 179/2012

ಪಿ.ಡಬ್ಲ್ಯೂ: 02 (Rajanna)

ದಿನಾಂಕ: 06.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: 1 ನೇ ಪ್ರತಿವಾದಿ ಪರ – ಶ್ರೀ ಹೆಚ್ ಜಿ ಆರ್ ವಕೀಲರಿಂದ.

ದಾನಪತ್ರ ಬರೆಯುವ ಸಮಯದಲ್ಲಿ ಶಾಂತಮ್ಮ ಮತ್ತು ಅವರ ಮಗಳು ನಿಂಗಮ್ಮ ಜೀವಂತ ಇದ್ದರು. ಪ್ರತಿವಾದಿ 1 ಪಾಲಯ್ಯನ ಹೆಂಡತಿ. ದಾನಪತ್ರ ಬರೆದುಕೊಟ್ಟಿರುವ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ಆದ ಕಾರಣ ಪಾಲಮ್ಮಳಿಗೆ ಮಾತ್ರ ದಾನಪತ್ರ ಬರೆದುಕೊಡಲು ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಹಕ್ಕು ಇದೆ. ಶಾಂತಮ್ಮ ನಿಂಗಮ್ಮಳಿಗೆ ದಿ: 09.02.2000 ರಂದು ಸರ್ವೆ ನಂಬರ್ 105 ರ 8 ಎಕರೆ 66 ಸೆಂಟ್ಸಗೆ ಸಂಬಂಧಪಟ್ಟಂತೆ ಒಂದು ದಾನಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಹೌದು. ಆ ಸಮಯದಿಂದ ನಿಂಗಮ್ಮ ಸದರಿ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ನಾವು ಮತ್ತು ಅವರು ಇದ್ದೇವೆ. ಅದಕ್ಕಿಂತ ಮೊದಲು ಶಾಂತಮ್ಮ ಸ್ವಾಧೀನದಲ್ಲಿದ್ದರು ಎಂದರೆ ನಮ್ಮ ತಂದೆ ಮತ್ತು ಚಿಕ್ಕಪ್ಪನಾದ ಮೃತ 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದರು. ಶಾಂತಮ್ಮಳಿಗೆ ಸರ್ವೆ ನಂಬರ್ 105 ರ 26 ಎಕರೆ 1 ಸೆಂಟ್ಸನಲ್ಲಿ 1/3 ಭಾಗ ಇದ್ದ ಕಾರಣ ಸದರಿ ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಮಾರಯ್ಯನ 3 ಜನ ಮಕ್ಕಳಿಗೂ ತಲಾ ಒಂದು ಭಾಗ ಇತ್ತು.

ಪೂರ್ವಕ್ಕೆ ಹೊಟ್ಟೆ ಈರಣ್ಣನ ಜಮೀನು, ಪಶ್ಚಿಮಕ್ಕೆ ಕೊಟ್ಟಿಗೆ ನಿಂಗಯ್ಯನ ಜಮೀನು, ಉತ್ತರಕ್ಕೆ ಉದ್ದ ರಾಜಪ್ಪನ ಜಮೀನು, ದಕ್ಷಿಣಕ್ಕೆ ಕೊಟ್ಟಿಗೆ ನಿಂಗಯ್ಯನ ಜಮೀನು, ಈ ಚೆಕ್‌ಬಂದಿ ಶಾಂತಮ್ಮ ಬರೆದುಕೊಟ್ಟ ದಾನಪತ್ರದ ಆಸ್ತಿಗೆ ಒಳಪಟ್ಟಿದೆ ಎಂದರೆ ಹೌದು. ಇದು ಶಾಂತಮ್ಮಳ ಭಾಗಕ್ಕೆ ಬಂದಿತ್ತು ಎಂದರೆ ಅದಕ್ಕೆ ಮೊದಲೇ ನಮಗೆ ದಾನಪತ್ರ ಬರೆದುಕೊಟ್ಟಿದ್ದರು. ಪಾಲಮ್ಮ ಬರೆದುಕೊಟ್ಟ ದಾನಪತ್ರದ ಆಸ್ತಿಯ ಮೇಲೆ ಪಾಲಮ್ಮಳಿಗೆ ಸಂಪೂರ್ಣ ಹಕ್ಕಿಲ್ಲದ ಕಾರಣ ಅದು ಕಾನೂನಿನಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪಾಲಮ್ಮ ಬರೆದುಕೊಟ್ಟ ದಾನಪತ್ರದ ಮೂಲ ಪತ್ರ ಕಳೆದುಹೋಗಿದೆ. ನಿಂಗಮ್ಮಳಿಗೆ ದಾವಾ ಆಸ್ತಿಯಲ್ಲಿ 1/3 ಭಾಗ ಇದೆ ಎಂದರೆ ಸುಳ್ಳು.

ಪ್ರತಿವಾದಿ 2-8 ನೇ ವಕೀಲರು ಪಾಟೀ ಸವಾಲಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.